ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್.ನಂಃ 28/2010

ಚಾ.ಸಾ-4 ಪ್ರಾ.ಸಾ-18 ದಿನಾಂಕಃ 23.05.2018

ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

| | | |
|---|---|---|
| ಹೆಸರು | : | ಈಶ್ವರ್ |
| ತಂದೆಯ ಹೆಸರು | : | ನಂಜಪ್ಪ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ಎಲ್.ಐ.ಸಿ ಏಜೆಂಟ್ |
| ವಾಸ | : | ಸಕಲೇಶಪುರ |

ಮುಖ್ಯ ವಿಚಾರಣೆಃ ಸರ್ಕಾರದ ಪರ ಪಿಪಿ ರವರಿಂದಃ

ನನಗೆ 1 ನೇ ಆರೋಪಿ ಗೊತ್ತು. 2 ನೇ ಆರೋಪಿ ಗೊತ್ತಿಲ್ಲ. ಚಾಸಾ-1 ರವರ ಹೆಸರು ಕೇಳಿದ್ದೇನೆ, ಆದರೆ ಅವರು ಗೊತ್ತಿಲ್ಲ. ಸುಮಾರು 7-8 ವರ್ಷಗಳ ಹಿಂದೆ ನಾನು ಸಕಲೇಶಪುರ ಟೌನ್ ಪೊಲೀಸ್ ಠಾಣೆಗೆ ನನ್ನ Insurance ಕೆಲಸಕ್ಕೆ ಹೋಗಿದ್ದೆ. ಆಗ ಪೊಲೀಸರು ಒಂದು ದಾಖಲೆಗೆ ನನ್ನ ರುಜು ಪಡೆದರು. ಆ ದಾಖಲೆಯನ್ನು ಪೊಲೀಸರು ನನಗೆ ಓದಿ ಹೇಳಿದ್ದರು, ಆದರೆ ಈಗ ಮರೆತುಹೋಗಿರುತ್ತದೆ. ದಾಖಲೆ ಮೇಲಿರುವ ರುಜುವನ್ನು ಸಾಕ್ಷಿ ಗುರುತಿಸಿದ್ದು ಇದನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು.

ಪೊಲೀಸರು ನನ್ನನ್ನು 1 ನೇ ಆರೋಪಿಯ ಮೆಡಿಕಲ್ ಶಾಪ್ ಗೆ ಕರೆದುಕೊಂಡು ಹೋಗಿರಲಿಲ್ಲ. ನನ್ನ ಸಮಕ್ಷಮ 1 ನೇ ಆರೋಪಿಯ ಅಂಗಡಿಯಿಂದ 1 ನೇ ಆರೋಪಿಯೇ ಕಂಪ್ಯೂಟರ್, ಸಿಡಿ, ಪ್ರಿಂಟರ್, ಲೆಟರ್ ಹೆಡ್ಸ್, ಸಾಯಿ ಟ್ರಾನ್ಸಪೋರ್ಟನ ರಿಸಿಪ್ಟ್ಸ ಮತ್ತು ಡಾಕ್ಟರನ ಸೀಲು ಇವು ಯಾವನ್ನು ಹಾಜರುಪಡಿಸಿಲ್ಲ. 1 ನೇ ಆರೋಪಿಯ ಅಂಗಡಿಯಲ್ಲಿ ಯಾವುದೇ ಮಹಜರಿಗೂ ನನ್ನ ರುಜು ಪಡೆಯಲಿಲ್ಲ.

1 ನೇ ಆರೋಪಿ ನನ್ನನ್ನು ಮತ್ತು ಪೊಲೀಸರನ್ನು ವಿ.ಆರ್.ಎಲ್‌ನ ಪಾರ್ಸೆಲ್ ಕಚೇರಿಗೆ ಕರೆದುಕೊಂಡು ಹೋಗಿರಲಿಲ್ಲ. 1 ನೇ ಆರೋಪಿಯ ಚ್ಯುತಾವಣೆಯ ಮೇರೆಗೆ ಯಾವುದೇ ವಸ್ತುಗಳನ್ನು ಕಚೇರಿಯಲ್ಲಿದ್ದ ವ್ಯಕ್ತಿಗಳು ಹಾಜರುಪಡಿಸಲಿಲ್ಲ ಮತ್ತು ಅಂತಹ ವಸ್ತುಗಳನ್ನು ಅಮಾನತುಪಡಿಸಿ ಮಹಜರ್ ಬರೆದು ನನ್ನ ರುಜು ಪಡೆದಿಲ್ಲ.

1 ನೇ ಆರೋಪಿ ನಮ್ಮನ್ನು ಮತ್ತು ಪೊಲೀಸರನ್ನು ಸಾಯಿ ಟ್ರಾನ್ಸಪೋರ್ಟ್ ಸಕಲೇಶಪುರ ಕಚೇರಿಗೆ ಕರೆದುಕೊಂಡು ಹೋಗಿರಲಿಲ್ಲ. 1 ನೇ ಆರೋಪಿಯ ಚ್ಯುತಾವಣೆಯ ಮೇರೆಗೆ ಯಾವುದೇ ವಸ್ತುಗಳನ್ನು ಕಚೇರಿಯಲ್ಲಿದ್ದ ವ್ಯಕ್ತಿಗಳು ಹಾಜರುಪಡಿಸಲಿಲ್ಲ ಮತ್ತು ಅಂತಹ ವಸ್ತುಗಳನ್ನು ಅಮಾನತುಪಡಿಸಿ ಮಹಜರ್ ಬರೆದು ನನ್ನ ರುಜು ಪಡೆದಿಲ್ಲ.

ಈಗ ತೋರಿಸಿದ ನಿಪಿ-9 ಮತ್ತು ನಿಪಿ-10ರ ಮೇಲೆ ಇರುವ ರುಜುಗಳು ನನ್ನವು. ಈ ರುಜುಗಳನ್ನು ನಿಪಿ-9(ಸಿ) ಮತ್ತು ನಿಪಿ-10(ಬಿ) ಎಂದು ಗುರುತಿಸಲಾಯಿತು. ನಿಪಿ-9 ಮತ್ತು 10ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಮೇಲ್ಕಂಡ ಮಹಜರಗಳಡಿ ಅಮಾನತುಪಡಿಸಿದ ವಸ್ತುಗಳನ್ನು ತೋರಿಸಿದರೆ ಗುರುತಿಸಲಾಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜನೆಯವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ದಾಖಲೆ ಪರಿಶೀಲಿಸಿ ಅನುಮತಿ ನೀಡಲಾಯಿತು).

<u>ಪಾಟೀಸವಾಲುಃ ಸರ್ಕಾರದ ಪರ ಪಿಪಿ ರವರಿಂದಃ</u>

ದಿನಾಂಕ **29.10.2009** ರಂದು ಪೊಲೀಸರು ನಮ್ಮನ್ನು 1 ನೇ ಆರೋಪಿಯ ಹೇಳಿಕೆಯ ಮೇರೆಗೆ ಆತನ ಅಂಗಡಿ ಎಸ್.ಎಸ್ ಮೆಡಿಕಲ್ ಒಳಗೆ ಕರೆದುಕೊಂಡು ಹೋಗಿ ಅಲ್ಲಿದ್ದ ಕಂಪ್ಯೂಟರ್, ಸಿಡಿ, ಪ್ರಿಂಟರ್, ಲೆಟರ್ ಹೆಡ್ಸ್, ಸಾಯಿ ಟ್ರಾನ್ಸಪೋರ್ಟನ ರಿಸಿಪ್ಟ್ ಮತ್ತು ಡಾಕ್ಟರನ ಸೀಲು ಇವುಗಳನ್ನು ಹಾಜರುಪಡಿಸಿದ ಮೇರೆಗೆ ಪೊಲೀಸರು ಅವುಗಳನ್ನು ಅಮಾನತುಪಡಿಸಿ ನಿಪಿ-8 ರಡಿಯಿರುವ ಮಹಜರನ್ನು ಬರೆದು ಓದಿ ಹೇಳಿ ಅದೇ ಸ್ಥಳದಲ್ಲಿ ನನ್ನ ರುಜು ಪಡೆದಿದ್ದಾರೆ ಎನ್ನುವ ಸಲಹೆಗಳು ಸುಳ್ಳು.

ದಿನಾಂಕ **29.10.2009** ರಂದು ಪೊಲೀಸರು ನನ್ನನ್ನು 1 ನೇ ಆರೋಪಿಯ ಹೇಳಿಕೆಯ ಮೇರೆಗೆ ಸಕಲೇಶಪುರ ಪಟ್ಟಣ ಮಹೇಶ್ವರ ನಗರ ಬಡಾವಣೆಯಲ್ಲಿರುವ ವಿ.ಆರ್.ಎಲ್ ಲಾಜಿಸ್ಟಿಕ್ ಲಿಮಿಟೆಡ್ ಅಂಗಡಿಗೆ ಕರೆದುಕೊಂಡು ಹೋಗಿ ಅಂಗಡಿಯಲ್ಲಿದ್ದ ವೆಂಕಟೇಶ ಎಂಬ ವ್ಯಕ್ತಿಯನ್ನು 1 ನೇ ಆರೋಪಿ ಗುರುತಿಸಿ ರಸೀದಿ ಸಂಖ್ಯೆ **301390317** ಎಂಬುದನ್ನು ಅಮಾನತುಪಡಿಸಿ ನಿಪಿ-9 ರಡಿಯಿರುವ ಮಹಜರನ್ನು ಬರೆದು ಓದಿ ಹೇಳಿ ಅದೇ ಸ್ಥಳದಲ್ಲಿ ನನ್ನ ರುಜು ಪಡೆದಿದ್ದಾರೆ ಎನ್ನುವ ಸಲಹೆಗಳು ಸುಳ್ಳು.

ದಿನಾಂಕ 29.10.2009 ರಂದು ಪೊಲೀಸರು ನನ್ನನ್ನು 1 ನೇ ಆರೋಪಿಯ ಹೇಳಿಕೆಯ ಮೇರೆಗೆ ಸಕಲೇಶಪುರ ಪಟ್ಟಣದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿರುವ Sri Sai Transport and Courier Ltd ಮಳಿಗೆಗೆ ಕರೆದುಕೊಂಡು ಹೋಗಿ ರಸೀದಿ ಸಂಖ್ಯೆ 30112153 ಎಂಬುದನ್ನು ಅಮಾನತುಪಡಿಸಿ ನಿಪಿ-10 ರಡಿಯಿರುವ ಮಹಜರನ್ನು ಬರೆದು ಓದಿ ಹೇಳಿ ಅದೇ ಸ್ಥಳದಲ್ಲಿ ನನ್ನ ರುಜು ಪಡೆದಿದ್ದಾರೆ ಎನ್ನುವ ಸಲಹೆಗಳು ಸುಳ್ಳು. ನನಗೆ ನಿಪಿ.8 ರಿಂದ ನಿಪಿ10 ರವರೆಗಿನ ಮಹಜರ್ ಗಳ ಎಲ್ಲಾ ಮಾಹಿತಿ ಇದ್ದರೂ ಮತ್ತು ನಿಪಿ.8 ರಿಂದ 10 ರಡಿ ಅಮಾನತುಪಡಿಸಿರುವ ವಸ್ತುಗಳನ್ನು ಗುರುತಿಸಲು ಸಾಧ್ಯವಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

<u>ಪಾಟೀಸವಾಲುಃ ಆರೋಪಿಯರ ಪರ ವಕೀಲರಿಂದಃ</u>

ಏನೂ ಇಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ.

ಪ್ರಧಾನ ಜಿಲ್ಲಾ ನ್ಯಾಯಾಧೀಶರು,
ಹಾಸನ.